# ಓದುವ ಕಾಯಿಲೆ

# Reading disease

**- ಇಂದಿರಾ ವಿಜಯಸಿಂಹ**

ಓದುವುದು ಒಂದು ಸಾಂಕ್ರಾಮಿಕ ರೋಗದಂತೆ : ಅದನ್ನು ಅಂಟಿಸಿಕೊಳ್ಳಬೇಕು; ಕಲಿಸಲಾಗುವುದಿವುದಿಲ್ಲ. (ಮತ್ತೆ ಯಾರಿಗೆ ಅದು ಅಂಟಿರುವುದಿಲ್ಲವೂ ಅವರಿಂದ ಅಂಟಿಸಿಕೊಳ್ಳಲಾಗದು .

**ಕ್ರಿಸ್ಟೀನ್ ನಟ್ಟಲ್ (1983:1927)**

ನನ್ನದೇ ಉದಾಹರಣೆ ತೆಗೆದುಕೊಂಡರೆ, ನಾನು ತುಂಬ ಎಳವೆಯಲ್ಲೇ ಓದಿನ ಸೋಂಕಿಗೆ ತುತ್ತಾದೆ ಮತ್ತು ನನ್ನ ಮೊದಲ ಮಗುವಿಗೆ ಅವಳ ಮೊದಲ ಹುಟ್ಟುಹಬ್ಬದೊಳಗೇ ಸೋಂಕು ತಗಲಿಸುವುದರಲ್ಲಿ ಯಶಸ್ವಿಯಾಗಿದೆ! ಇಲ್ಲ, ಪ್ರಚಂಡ ಶಿಶುವೇನೂ ಆಗಿರಲಿಲ್ಲ ಅವಳು. ಓದಿನ ಅತ್ಯಂತ ಸರಳ, ತುಂಬಾ ಕೆಳಮಟ್ಟದ ಪರೀಕ್ಷೆಯಲ್ಲೂ ಅವಳು ಪಾಸಾಗುವಂತಿರಲಿಲ್ಲ. ಆದರೆ ಇದನ್ನು ನೋಡಿ: 'ಬೀಟ್ರಿಕ್ಸ್ ಪಾಟರ್ ನ ಪೀಟರ್ ಮೊಲ' ಕತೆಯ ಪಠ್ಯಕ್ಕೆ ಅನುಗುಣವಾದ ಕ್ರಿಯೆಗಳ ಸರಣಿಯನ್ನೇ ಆಕೆ ಮಾಡಿತೋರಿಸ-ಬಲ್ಲವಳಾಗಿದ್ದಳು. ಅವೆಲ್ಲ ಅವಳಿಗೆ ಕತೆಯನ್ನು ಗಟ್ಟಿಯಾಗಿ ಓದಿ ಹೇಳುವಾಗ ನಾನು ಮಾಡುತ್ತಿದ್ದ ಹಾವಭಾವಗಳ ಅನುಕರಣೆಯೇ ಆಗಿತ್ತೆಂಬುದರಲ್ಲಿ ಅನುಮಾನವೇ ಇಲ್ಲ. ಬಲು ಬೇಗ ಬೇರೆ ಬೇರೆ ವಿಷಯಗಳ ಕುರಿತ ಬಗೆ ಬಗೆಯ ಪುಸ್ತಕಗಳು ತುಂಬಿದ ಕಪಾಟನ್ನು ಅಂಬೆಗಾಲಿಕ್ಕುತ್ತ ಸಮೀಪಿಸಿ ತನ್ನ ಪುಸ್ತಕವನ್ನೇ ಆಕೆ ಆಯ್ದುಕೊಳ್ಳ ಸರಿಯಾಗಿ ಲಾರಂಭಿಸಿದಳು. ಅವಳು ಯಾವಾಗ ಹೇಗೆ ಓದುವ ತಂತ್ರಗಳನ್ನು ಕಲಿತುಕೊಂಡಳೋ ನಮಗಾರಿಗೂ ಸ್ಪಷ್ಟವಿಲ್ಲ. ಡೊಮನ್ ರ 'ಪೂರ್ಣ' ಪದ ವಿಧಾನವನ್ನು ಪ್ರಯೋಗಿಸಿದ ಪೂರಕ ನೆನಪಷ್ಟೇ ನಮಗಿರುವುದು. ಅದನ್ನೂ ಹೆಚ್ಚು ದಿನ ನಡೆಸಲಿಲ್ಲ. ನಂತರದ ವರ್ಷಗಳಲ್ಲಿ ಈ ಮಗು ಓದುವುದರಲ್ಲಿ ಮಗ್ನಳಾಗಿಯೇ ದಿನಗಳೆಯುತ್ತಿರುವಂತೆ ತೋರುತ್ತಿತ್ತು. ಒಂದು ಕೈಯಲ್ಲಿ ತನ್ನ ದೈನಿಕದ ಕೆಲಸಗಳನ್ನು ಮಾಡುತ್ತಿರುವಾಗಲೂ ಇನ್ನೊಂದು ಕೈಯಲ್ಲಿ ಪುಸ್ತಕ ಹಿಡಿದು ಓದುತ್ತಿದ್ದಳು. "ಊಟ ಮಾಡುವಾಗ ಓದಬಾರದು" ಎಂಬ ಊಟದ ಹೊತ್ತಿನಲ್ಲಿ ನಾವು ಮಕ್ಕಳಾಗಿದ್ದಾಗ ನಮ್ಮ ತಾಯಿ ವಿಧಿಸುತ್ತಿದ್ದ ನಿಯಮವನ್ನು

ವಿಧಿಸಿ ನೋಡಿದೆ. ಇನ್ನಿತರ ಮುಖ್ಯ ಕಾರ್ಯಗಳಿಗೆ ಅನುವು ಮಾಡಿಕೊಡಲು ಓದಿನ ರೋಗವನ್ನು ನಿಯಂತ್ರಿಸಲೇಬೇಕೆಂಬುದನ್ನು ನೀವೂ ಒಪ್ಪುತ್ತೀರಿ. ನಿಜ, ಕೆಲವು ಕೆಲಸಗಳನ್ನು ಓದಿನ ಜೊತೆ ಜೊತೆಯೇ ಮಾಡುವುದು ಸಾಧ್ಯವಿದೆ. ಸ್ವತಃ ನಾನೇ ನನ್ನ ಶಾಲಾ ದಿನಗಳಲ್ಲಿ ಕನ್ನಡಕ ಮತ್ತು ಪ್ಲಾಸ್ಟಿಕ್ ಪುಟಗಳ ಮೇಲೆ ಒಂದು ಪುಟ್ಟ ವೈಪರ್ ಇದ್ದರೆ ಸ್ನಾನ ಮಾಡುವಾಗಲೂ ಓದಬಹುದಿತ್ತು ಎಂದು ಯೋಚಿಸುತ್ತಿದ್ದೆ. “ಓದು ಸೋಂಕಿತ ವ್ಯಕ್ತಿ” (ಓ. ಸೋಂ. ವ್ಯ.) ಗಳ ಮುಂದಿರುವ ಸವಾಲೆಂದರೆ ಶಾಲೆಯು ತಮ್ಮ ಓದಿಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದು. ದಪ್ಪ ಭೌತಶಾಸ್ತ್ರ ಪಠ್ಯಪುಸ್ತಕದಡಿ ಅಡಗಿರುವ ಕಾದಂಬರಿಯನ್ನು ಓದುವುದು, ಉದ್ದ ನೋಟ್ ಬುಕ್ ಗಳ ಹೊದಿಕೆಯಲ್ಲಿ ನಿಯತಕಾಲಿಕೆಗಳನ್ನು ಅಡಗಿಸಿಡುವುದು, ಇತ್ತೀಚಿನ ರೋಚಕ ಕಾದಂಬರಿಗಳ ರಹಸ್ಯ ಓದಿಗೆ ಅನುಕೂಲವಾಗುವಂತೆ ಹೊಸ ಟರ್ಮ್ ಆರಂಭವಾಗುವ ಮೊದಲೇ ಪಠ್ಯಪುಸ್ತಕಗಳನ್ನೆಲ್ಲ ಓದಿ ಮುಗಿಸಿರುವುದು, ತರಗತಿಯ ಸಮಯದಲ್ಲಿ ತಡೆ ಇಲ್ಲದ ಓದಿಗಾಗಿ ಸ್ನೇಹಪರ ಮರದ ಕೊಂಬೆಗಳ ನಡುವೆ ಅವಿತಿರುವುದು, ಬಚ್ಚಲುಮನೆಯಲ್ಲಿ ಬಹಳ ಹೊತ್ತಿನವರೆಗೆ ಕಣ್ಮರೆಯಾಗಿರುವುದು... - ಇಂತಹ ತಂತ್ರಗಳನ್ನು ಓ.ಸೋಂ.ವ್ಯ.ಗಳು ಅವಲಂಬಿಸುತ್ತಾರೆ. ಚಿಕ್ಕಮಕ್ಕಳು ಓದುವ ಸೋಂಕನ್ನು ಅಂಟಿಸಿಕೊಳ್ಳಬಹುದಾದ ಮೂಲಗಳು ಹಲವು. ತಂದೆ-ತಾಯಿ, ಅಜ್ಜ-ಅಜ್ಜಿ, ಸಂಬಂಧಿಕರು, ಗೆಳೆಯರು ಮತ್ತು ಗುರುಗಳು ಹೆಚ್ಚು ಸಂಭಾವ್ಯ ಸೋಂಕುವಾಹಕಗಳು. ಗ್ರಂಥಾಲಯಗಳು ಮತ್ತು ಪುಸ್ತಕ ಮಳಿಗೆಗಳು ಸೋಂಕಿಗೆ ನಿಜವಾಗಿಯೂ ಕಾವು ಪೆಟ್ಟಿಗೆಗಳೇ ಸರಿ. ನಾನು ನಿಮ್ಮ ಮುಂದೆ ಕೆಲವು ವಿವರಣಾತ್ಮಕ ನಿದರ್ಶನಾಧ್ಯಯನಗಳನ್ನು – ಬೇಕಾದರೆ ನೀವದನ್ನು ಮುನ್ನೆಚ್ಚರಿಕೆಯ ಕತೆಗಳು ಎನ್ನಿ – ಪ್ರಸ್ತುತಪಡಿಸುತ್ತೇನೆ. ಅವು ರೋಗನಿರೋಧಕವನ್ನು ಹೇಗೆ ಸುಲಭವಾಗಿ ನಿವಾರಿಸಿಕೊಳ್ಳಬಹುದೆಂಬುದನ್ನು ತೋರಿಸುತ್ತವೆ.

ನಾಲ್ಕು ವರ್ಷ ವಯಸ್ಸಿನ ಹುಡುಗಿಯೊಬ್ಬಳನ್ನು ಶಾಲೆಗೆ ಸೇರಿಸಲಾಗಿತ್ತು. ಅವಳ ತಂದೆ-ತಾಯಿಗಳೇ ಸೋಂಕಿನ ವಾಹಕಗಳಾಗಿದ್ದರೂ ಮತ್ತು ದೀರ್ಘಕಾಲದ ಸೋಂಕಿನ ಸಂಪೂರ್ಣವಾದ ರೋಗಲಕ್ಷಣಗಳನ್ನು ತೋರ್ಪಡಿಸುತ್ತಿದ್ದರೂ ಆ ಹುಡುಗಿ ಸುಮಾರು ಆರು ತಿಂಗಳವರೆಗೆ ಪ್ರತಿರೋಧವನ್ನು ಹೊಂದಿದ್ದಳು. ಪುಟ್ಟ ಹುಡುಗಿಯ ಶಿಕ್ಷಕರು ಮಕ್ಕಳಿಗೆ ಧ್ವನಿ ಮತ್ತು ಚಿಹ್ನೆಗಳ ನಡುವಿನ ಸಂಬಂಧವನ್ನು ಅರಿಯುವುದಕ್ಕೆ ಸಹಾಯ ಮಾಡಲೆಂದು ಉಚ್ಚಾರ ಅಭ್ಯಾಸದ ಸರಣಿಯನ್ನು ಆರಂಭಿಸಿದರು. ಸುಮಾರು ಮೂರು ತಿಂಗಳ ಅವಧಿಯಲ್ಲಿ ಮಗುವಿನ ತಾಯಿಯು ರಜಾಕಾಲದ ವಿಹಾರಧಾಮವೊಂದರಲ್ಲಿ ನಿರ್ದಿಷ್ಟ ಕೊಠಡಿಗೆ ಹೋಗಲು ಮಗು

ನಿರಾಕರಿಸಿತೆಂದು ವರದಿ ಮಾಡಿದರು. ಏಕೆಂದು ಕೇಳಿದಾಗ ಮಗುವು ಕೋಣೆಯ ಮೇಲೆ GUEST ROOM ಎಂದು ಬರೆದಿರುವ ಫಲಕವನ್ನು ತೋರಿಸಿ ಹೇಳಿತು: "Ghost Room – ನಂಗೆ ಭಯವಾಗ್ತಿದೆ ಮಮ್ಮಿ!" ಮಗು ಚಿಹ್ನೆಗಳಿಂದ ಅರ್ಥಕ್ಕೆ ಆಗಲೇ ಜಿಗಿದಿದ್ದಳು. ಅಂದರೆ ಅವಳಲ್ಲಿ ರೋಗ ಉತ್ಪತ್ತಿಯಾಗೇ ಬಿಟ್ಟಿತ್ತು. ಅಲ್ಲಿಂದ ಮುಂದೆ ಅದು ವೇಗವಾಗಿ ಉಲ್ಬಣಿಸಿತು.

ಮುಂದಿನ ನಿದರ್ಶನಾಧ್ಯಯನ ಐದು ವರ್ಷದ ಬಾಲಕನಿಗೆ ಸಂಬಂಧಿಸಿದ್ದು. ಅವನು ಸೋಂಕಿಗೆ ಒಳಗಾಗದಂತೆ ಸಂಪೂರ್ಣವಾಗಿ ಪ್ರತಿರಕ್ಷಿತನಾಗಿದ್ದಂತಿದ್ದ. ಈ ನಿದರ್ಶನದಲ್ಲಿ ರೋಗನಿರೋಧಕ ಶಕ್ತಿಯು ದೂರದರ್ಶನದ 'He-Man' ಎಂಬ ಪಾತ್ರವನ್ನು ಪ್ರದರ್ಶಿಸುವ ಕಾರ್ಟೂನ್ ಗಳ ಆಕರ್ಷಣೆಯಿಂದ ಹುಟ್ಟಿಕೊಂಡಿರುವಂತಿತ್ತು. ಒಂದು ದಿನ ಮಗುವು ಗೊಣಗುತ್ತಲೇ ತನ್ನ ತಾಯಿಯೊಡನೆ ಗ್ರಂಥಾಲಯಕ್ಕೆ ಹೋದ. ಅಲ್ಲಿ ಆತ ಆಕಸ್ಮಿಕವಾಗಿ ಅದೇ ಪಾತ್ರವನ್ನೇ ಚಿತ್ರಿಸುವ ಪುಸ್ತಕವೊಂದನ್ನು ಕಂಡು ಅದನ್ನು ಎರವಲು ಪಡೆಯಬಹುದೇ ಎಂದು ಕೇಳಿದ. ಮಗನ ಕೋರಿಕೆಗೆ ತಾಯಿ ಸಮ್ಮತಿಸಿದಳು. ಆ ಕ್ಷಣದಿಂದಲೇ ಎಷ್ಟೋ,ಲ್ಲ ವರ್ಷಗಳ ಆರ್ಜಿತ ಓದು-ನಿರೋಧಕ-ಶಕ್ತಿ ಕ್ಷೀಣಿಸಲಾರಂಭಿಸಿತು. ಲೈಬ್ರರಿಯಲ್ಲಿ He-Man ಪುಸ್ತಕಗಳ ಪೂರೈಕೆ ಶೀಘ್ರದಲ್ಲೇ ಮುಗಿದುಹೋಗುತ್ತದೆ ಎಂದು ಹೆದರಿ (ಒಮ್ಮೆ ಸೋಂಕು ತಗಲಿದ ಮೇಲೆ ರೋಗಿಗೆ ಅವಿರತವಾಗಿ ಪುಸ್ತಕಗಳನ್ನು ಒದಗಿಸುತ್ತಲೇ ಇರಬೇಕಾಗುತ್ತದೆ) ಮಗುವು He-Man ಮಾಲಿಕೆಯ ಒಂದು ಪುಸ್ತಕವನ್ನು ಆಯ್ದುಕೊಂಡ ಪ್ರತಿಬಾರಿಯೂ ತಾಯಿಯು ಜಾಣತನದಿಂದ ಮತ್ತೂ ಒಂದು ಬೇರೆ ಪುಸ್ತಕವನ್ನು ತೆಗೆದುಕೊಳ್ಳುವಂತೆ ಒಪ್ಪಿಸುತ್ತಿದ್ದಳು. ಹೀಗೆ ಆಕೆ ಸನ್ನಿಹಿತವಾದ ಬಿಕ್ಕಟ್ಟನ್ನು ಪೂರ್ವಭಾವಿಯಾಗೇ ನಿವಾರಿಸಿಕೊಳ್ಳಲು ಸಾಧ್ಯವಾಯಿತು. ಈ ಹುಡುಗ ಮಾಲಿಕೆಯಿಂದ ಮಾಲಿಕೆಗೆ ಚಲಿಸಿದನೆಂದೂ, ಪ್ರತಿಬಾರಿಯೂ ಮಾಲಿಕೆಯು ಕೊನೆಗೊಳ್ಳಲು ಬರುತ್ತಿದ್ದಂತೆ ತಾಯಿಯ ಚೋದನೆಯಿಂದ ತನ್ನ ಆದ್ಯತೆಯ ಪುಸ್ತಕವನ್ನು ಬಿಟ್ಟು ಬೇರೆ ಪುಸ್ತಕವನ್ನೂ ಆಯ್ದುಕೊಂಡನೆಂದೂ ದಾಖಲೆಗಳು ಸೂಚಿಸುತ್ತವೆ.

ನಾನು ಸಾದರಪಡಿಸಲು ಬಯಸುವ ಕೊನೆಯ ನಿದರ್ಶನಾಧ್ಯಯನವೂ ಸಹಿತ ಒಬ್ಬ ಪುಟ್ಟ ಹುಡುಗನ ಕುರಿತಾಗಿಯೇ ಇದೆ. ಈ ಹುಡುಗ ಓದುವ ರೋಗದ ವಿರುದ್ಧ ಒಂದು ಬಗೆಯ ನೈಸರ್ಗಿಕ ಪ್ರತಿರಕ್ಷೆಯನ್ನು ಹೊಂದಿರುವಂತೆ ತೋರುತ್ತಿದ್ದ. ಆ ಕುಟುಂಬವು ಉದ್ದೇಶಪೂರ್ವಕವಾಗಿ ದೂರದರ್ಶನ ಸೆಟ್ ನ್ನು ಕೊಂಡುಕೊಂಡಿರಲಿಲ್ಲ. ರೋಗನಿರೋಧಕ ಶಕ್ತಿಗೆ ಬೇರಾವ ಕಾರಣಗಳೂ ಇದ್ದಂತಿರಲಿಲ್ಲ. ಈ ನಿದರ್ಶನದಲ್ಲೂ ಸಹಿತ ತಂದೆ-ತಾಯಿಗಳಿಬ್ಬರೂ

ತೀವ್ರವಾಗಿ ಸೋಂಕಿಗೆ ಒಳಗಾದವರು ಎಂಬುದನ್ನು ಗಮನಿಸುವುದು ಮುಖ್ಯ. ಈ ಹುಡುಗನ ಒಡಹುಟ್ಟಿದವರೂ ಕಾಯಿಲೆ ಅಂಟಿಸಿಕೊಂಡವರೇ. ಶಾಲೆಯಲ್ಲಿ ಶಿಕ್ಷಕರಿಗೂ ಹುಡುಗನ ನಿರೋಧಕ ಶಕ್ತಿಯನ್ನು ಮುರಿಯಲಾಗಿರಲಿಲ್ಲ. ಬಹುಶಃ ಈ ಮಗುವು ತರಗತಿಯಲ್ಲಿ ಉಚ್ಚಾರಗಳ ಅಭ್ಯಾಸ ಮಾಡುತ್ತ ಕಾಲಕಳೆಯುವುದರ ಬದಲು ಹೊರಾಂಗಣದಲ್ಲಿ ಆಡಲು ಬಯಸುತ್ತಿದ್ದುದೇ ಇದಕ್ಕೆ ಕಾರಣ. ಒಂದು ದಿನ ಅಲೆದಾಡುತ್ತ ಈ ಹುಡುಗ ಹಿರಿಯ ಮಕ್ಕಳ ತರಗತಿಯೊಳಗೆ ನಡೆದ. ಅಲ್ಲಿ ಶಿಕ್ಷಕರು ತರಗತಿಯ ಕಿಟಕಿಯ ಹೊರಗೆ ಬೇಲಿಯ ಮೇಲೆ ಒಂದು ಬೇಲಿಚಟಕ ಹಾಡುತ್ತಿರುವುದನ್ನು ಮಕ್ಕಳಿಗೆ ತೋರಿಸುತ್ತಿದ್ದರು. ಮೋಡಿಗೊಳಗಾದ ಹುಡುಗ ತನ್ನ ತಾಯಿಯ ಹತ್ತಿರ ಹೇಗೆ ತಮ್ಮ ಶಿಕ್ಷಕರು ತನಗೆ ಒಂದು 'ಬುಷ್ ಚಾಟರ್' ಎಂಬ ಹೆಸರಿನ ಒಂದು ಹಕ್ಕಿಯನ್ನು ತೋರಿಸಿದರು ಎಂಬುದನ್ನು ಹೇಳಿದ. ತಾಯಿಯು ಆ ಶಿಕ್ಷಕರನ್ನು ಭೇಟಿಯಾಗಿ ಆ ಹಕ್ಕಿಯ ಕುರಿತಾದ ಹುಡುಗನ ಕಲ್ಪನೆಯ ಬಗ್ಗೆ ತಮಾಷೆಯಾಗಿ ಮಾತನಾಡಿದರು. ಈ ಹಂತದಲ್ಲಿ ಶಿಕ್ಷಕರು ತಾಯಿಗೂ ಮಗುವಿಗೂ ಸಲೀಂ ಅಲಿಯವರ 'ಪಕ್ಷಿಗಳಿಗೆ ಕ್ಷೇತ್ರ ಮಾರ್ಗದರ್ಶಿ' ಕೃತಿಯಿಂದ ಹಕ್ಕಿಯ ಚಿತ್ರವೊಂದನ್ನು ತೋರಿಸಿದರು. ಪುಟ್ಟ ಹುಡುಗ ಆ ಪುಸ್ತಕ ಬೇಕೆಂದು ಕೇಳಿದ. ಶೀಘ್ರದಲ್ಲೇ ಆತ ತಾನು ನೋಡಿದ ಪಕ್ಷಿಗಳನ್ನೆಲ್ಲ ಪುಸ್ತಕದಲ್ಲಿ ಗುರುತಿಸಬಲ್ಲವನಾದ ಮತ್ತು ಅನೇಕ ಸಲ ಅವುಗಳನ್ನು ಹೆಸರಿಸುವಂತೆ ಶಿಕ್ಷಕರನ್ನು ಕೋರುತ್ತಿದ್ದ. ಶಿಕ್ಷಕರಿಗಿಂತ ಚೆನ್ನಾಗಿ ಆ ಪುಸ್ತಕವನ್ನು ಅರಿತುಕೊಂಡು ತನ್ನ ಗೆಳೆಯರಿಗೆ ಅವರೆಲ್ಲ ನೋಡಿದ, ತಾನು ಆತ್ಮವಿಶ್ವಾಸದಿಂದ ಗುರುತಿಸಿದ ಪಕ್ಷಿಗಳ ಚಿತ್ರವನ್ನು ತೋರಿಸಲು ಪುಸ್ತಕದ ಸರಿಯದ ಪುಟವನ್ನು ತ್ವರಿತವಾಗಿ ತಿರುಗಿಸಿ ತೋರಿಸಬಲ್ಲವನಾದ. ಪಕ್ಷಿಗಳ ಹೆಸರನ್ನು ತಾನೇ ಓದಬೇಕೆಂಬ ಹುಡುಗನ ಬಯಕೆಯು ಅವನ ರೋಗನಿರೋಧಕ ಶಕ್ತಿಗಿಂತ ಬಲವತ್ತರವಾಗಿತ್ತು ಮತ್ತು, ಅಯ್ಯೋ, ಈ ಮಗು ಕೂಡ ಶೀಘ್ರದಲ್ಲೇ ಸೋಂಕಿಗೆ ತುತ್ತಾಯಿತು. ಮುಂಬರಿಕೆ (ಫಾಲೋ ಅಪ್) ಅಧ್ಯಯನದ ಹೊತ್ತಿನಲ್ಲಿ ಈ ಹುಡುಗ - ಈಗ ಯುವಕನಾಗಿದ್ದಾನೆನ್ನಿ- ಪಕ್ಷಿಗಳ ಮೇಲಿನ ತನ್ನ ಆಸಕ್ತಿಯನ್ನು ಉಳಿಸಿಕೊಂಡಿಲ್ಲವೆಂದೂ, ಆದರೂ ಓದುವ ರೋಗದ ಸೋಂಕನ್ನು ಪೂರ್ತಿಯಾಗಿ ಹತ್ತಿಸಿಕೊಂಡಿದ್ದಾನೆಂದೂ, ಅದು ಕಡಿಮೆಯಾಗುವ ಯಾವ ಲಕ್ಷಣವೂ ಇಲ್ಲವೆಂದೂ ತಿಳಿದುಬಂತು.

ಹೀಗಾಗಿ ಸಹ-ರೋ.ಸೋಂ.ವ್ಯ.ಗಳೇ, ಈ ನಿದರ್ಶನಾಧ್ಯಯನಗಳ ಕುರಿತು ಆಲೋಚಿಸುವುದನ್ನು ನಿಮಗೆ ಬಿಡುತ್ತೇನೆ ಮತ್ತು ನಿಮ್ಮ ಅನುಭವದಿಂದ ಇನ್ನಷ್ಟು ನಿದರ್ಶನಗಳನ್ನು ದಾಖಲಿಸಿ ಎಂದು ಒತ್ತಾಯಿಸುತ್ತೇನೆ. ಇದರಿಂದ ನಾವು ಈ ಸಾಂಕ್ರಾಮಿಕ ರೋಗವನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಅದರ ಪ್ರಸಾರವನ್ನು ನಿಭಾಯಿಸಬಹುದು.

**ಉಲ್ಲೇಖಗಳು:**


- *From Reader to Reading Teacher* by Aebersold, J. and Fierd, M.L. ; Cambridge University Press 1997.
- *Research Methods in Language and Learning* by Nuttall, C.; Cambridge University Press 1983.
- *The Tale of Peter Rabbit* by Beatrix Potter.
- *He Man and the Master of the Universe*, Animated Series, Production Director: Sutherland ; H. ; Filmation Associates, Mattel
- *The Book of Indian Birds,* by Salim Ali, S. Bombay Natural Society, Bombay (Thirteenth Revised Edition)



**ಇಂದಿರಾ ವಿಜಯಸಿಂಹ** ಅವರು ಬೆಂಗಳೂರಿನ ಅಝೀಂ ಪ್ರೇಮ್ ಜಿ ಫೌಂಡೇಶನ್ ನ ಶೈಕ್ಷಣಿಕ ಸಲಹೆಗಾರರು. ಅವರು ಬೆಂಗಳೂರಿನ 'ಪೂರ್ಣ ಕಲಿಕಾ' ಕೇಂದ್ರದ ಸ್ಥಾಪಕ – ಟ್ರಸ್ಟಿ ಆಗಿದ್ದಾರೆ. ಇದು ಅವರು ತಮ್ಮ ಸ್ವಂತ ಮಕ್ಕಳಿಗೆ ಮನೆಯಲ್ಲೇ ಶಿಕ್ಷಣ ನೀಡುವ ನಿರ್ಧಾರವನ್ನು ತೆಗೆದುಕೊಂಡಾಗಿನ ಅವರ ಅನುಭವ ಮತ್ತು ಆಲೋಚನೆಗಳಿಂದ ಹೊರಹೊಮ್ಮಿದ "ಪರ್ಯಾಯ" ಶಾಲೆ. ಅವರು ಚಾಮರಾಜನಗರದ ಜಿಲ್ಲಾ ಗುಣಮಟ್ಟದ ಶಿಕ್ಷಣ ಯೋಜನೆಯಲ್ಲಿ (DQEP) ಆಳವಾಗಿ ತೊಡಗಿಸಿಕೊಂಡಿದ್ದಾರೆ. ಅಲ್ಲಿ ಅವರು ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಕುರಿತು ಕೋರ್ಸ್ ನ್ನು ಸಹ ವಿನ್ಯಾಸಗೊಳಿಸಿದ್ದಾರೆ ಮತ್ತು ಕಲಿಸುತ್ತಾರೆ. "ಪತಾರಾ" ಎಂಬ ಗುಂಪಿನ ಭಾಗವಾಗಿದ್ದರಲ್ಲದೆ ಅಲ್ಲಿ ಅವರು ಮಕ್ಕಳಿಗಾಗಿ ಹದಿನೈದು ದಿನಗಳಿಗೊಮ್ಮೆ ಕಥಾವಾಚನ ಗೋಷ್ಠಿಗಳನ್ನು ಆಯೋಜಿಸುವುದರಲ್ಲಿ ತೊಡಗಿಸಿಕೊಂಡಿದ್ದರು. ಅವರನ್ನು ಇಲ್ಲಿ ಸಂಪರ್ಕಿಸಬಹುದು:

indira@ajimpremjifoundation.org.